ಶ್ರೀ ಸಿ.ಎಂ. ಉದಾಸಿ (ಲೋಕೋಪಯೀಗಿ ಸಚಿವರು) :

ಅ) ಯಾವುದೇ ವರದಿ ಬಂದಿರುವುದಿಲ್ಲ.

ಆ) ಪ್ರಸ್ತಾವನೆ ಇರುವುದಿಲ್ಲ.

ತೋಟಗಾರಿಕೆ ಅಭಿವೃದ್ಧಿ

964 (1119) ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಚಟುವಟಿಕೆಗಳಿಗೆ ಯಾವ್ಯಾವ ಉತ್ತೇಜನಗಳನ್ನು ನೀಡಲಾಗುತ್ತಿದೆ;

ಆ) ಬೀದರ್ ಜಿಲ್ಲೆಯನ್ನು ತೋಟಗಾರಿಕಾ ವಿಷನ್ ಯೋಜನೆ ಯಡಿಯಲ್ಲಿ ಸೇರಿಸಲಾಗಿದೆಯೇ; ಹಾಗಿದ್ದಲ್ಲಿ ಜಿಲ್ಲೆಗೆ ಇವರಿಂದಾಗುವ ಪ್ರಯೋಜನಗಳೇನು;

ಇ) ಬೀದರ್ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ತೋಟಗಾರಿಕಾ ಕ್ಷೇತ್ರದ ಉತ್ತೇಜನಕ್ಕಾಗಿ ಎಷ್ಟು ಹಣ ಯಾವ್ಯಾವ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ;

ಈ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ರೂಪಿಸಿರುವ ಯೋಜನೆಗಳೇನು?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಈ ಕೆಳಕಂಡ ಉತ್ತೇಜನಗಳನ್ನು ನೀಡಲಾಗುತ್ತಿದೆ.

1) ಬಹು ವಾರ್ಷಿಕ ಹಾಗೂ ವಾರ್ಷಿಕ ಹಣ್ಣಿನ ಬೆಳೆಗಳ ಹೊಸ ತೋಟಗಳ ಸ್ಥಾಪನೆಗೆ ಶೇ 75% ಸಹಾಯಧನ (ಮಾವು, ಸಪೋಟ, ದಾಳಿಂಬೆ, ನಿಂಬೆ, ಮೊಸಂಬಿ, ಬಾಳೆ, ದ್ರಾಕ್ಷಿ).

2) ನರ್ಸರಿಗಳ ಸ್ಥಾಪನೆಗೆ ಶೇ 50% ರಷ್ಟು ಸಹಾಯಧನ.

3) ತೋಟಗಾರಿಕೆ ಬೆಳೆಗಳಿಗೆ ಸಾವಯವ ಅಳವಡಿಕೆ ಶೇ. 50% ರಷ್ಟು ಸಹಾಯಧನ (ಎರೆಹುಳು ಘಟಕ, ಬಯೋಡೈಜಿಸ್ಟರ್).

4) ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣೆ ಸಹಾಯಧನ ಶೇ.50% ರಷ್ಟು ಸಹಾಯಧನ.
5) ರಕ್ಷಿತ ಬೇಸಾಯಕ್ಕೆ ಶೇ 50% ರಷ್ಟು ಸಹಾಯಧನ.
6) ಕೊಯ್ಲೋತ್ತರ ನಿರ್ವಹಣೆ ಶೇ 25% ರಷ್ಟು ಸಹಾಯಧನ (ಪ್ಯಾಕ್ ಹೌಸ್).
7) ತೋಟಗಾರಿಕೆ ರೈತರಿಗೆ ಪ್ರವಾಸ.
8) ಸಾಂಬಾರು ಬೆಳೆ ಪ್ರದೇಶ ವಿಸ್ತರಣೆ (ಶುಂಠಿ ಮತ್ತು ಅರಿಷಿಣ).
9) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆ ಶೇ 75% ರಷ್ಟು ಸಹಾಯಧನ.
10) ತೋಟಗಾರಿಕೆ ಯಂತ್ರೋಪಕರಣಗಳಿಗೆ ಶೇ 50% ರಷ್ಟು ಸಹಾಯಧನ.
11) ಹಳ್ಳದಕೇರಿ ಕ್ಷೇತ್ರದಲ್ಲಿ ಜೈವಿಕ ಕೇಂದ್ರ ಸ್ಥಾಪನೆ.
12) ದುಂಡಾಣು ರೋಗದ ಬಾಧೆಗೊಳಗಾದ ದಾಳಿಂಬೆ ತೋಟಗಳಿಗೆ ಸಮಗ್ರ ರೋಗ ನಿಯಂತ್ರಣಕ್ಕೆ ಸಹಾಯಧನ.
13) ಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ.
14) ಹೊಸ ತರಕಾರಿ ಬೀಜಗಳ ವಿತರಣೆ.
15) ತೋಟಗಾರಿಕೆ ಬೆಳೆಗಳಿಗೆ ಕೀಟ ಮತ್ತು ರೋಗ ನಿಯಂತ್ರಣಕ್ಕೆ ಔಷಧಿಗಳ ವಿತರಣೆ.
16) ಉತ್ತಮ ಗುಣ ಮಟ್ಟದ ಹಣ್ಣಿನ ಬೆಳೆಗಳ ಕಸಿ, ಸಸಿಗಳನ್ನು ಉತ್ಪಾದಿಸುವುದು ಹಾಗೂ ವಿತರಿಸುವುದು
17) ವಿಶೇಷ ಘಟಕ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಹೊಸ ತೋಟಗಳ ಸ್ಥಾಪನೆಗೆ ಶೇ 75% ರಷ್ಟು ಸಹಾಯಧನ ನೀಡಲಾಗುತ್ತಿದೆ. (ಮಾವು, ದ್ರಾಕ್ಷಿ, ದಾಳಿಂಬೆ, ಬಾಳೆ, ಸೀಬೆ, ಸಪೋಟ)

ಆ) ಹೌದು.

ಜಿಲ್ಲೆಯ ರೈತರಿಗೆ ಮೇಲಿನ (ಆರ್) ರಂತೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ತೋಟಗಾರಿಕಾ ಕ್ಷೇತ್ರದ ಉತ್ತೇಜನಕ್ಕಾಗಿ ಒಟ್ಟು ರೂ. 848.66 ಲಕ್ಷ ಹಣವನ್ನು ಮೇಲಿನ ಬಿ ರಲ್ಲಿ ವಿವರಿಸಿರುವ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ. ವರ್ಷವಾರು ವಿವರ ಇಂತಿದೆ.

ವರ್ಷ	ಖರ್ಚು (ರೂ.ಲಕ್ಷಗಳಲ್ಲಿ)
2006–07	172.71
2007–08	354.97
2008–09	320.98
ಒಟ್ಟು	**848.66**

ಈ) ಮೇಲಿನ (ಅ) ರಲ್ಲಿರುವಂತೆ

ಸರ್ಕಾರಿ ವಸತಿ ಗೃಹಗಳ ದುರುಪಯೋಗ

966 (1112) ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ (ಕುಂದಗೋಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಶಹರದಲ್ಲಿರುವ ಲೋಕೋಪಯೋಗಿ ಇಲಾಖೆ ಹಾಗೂ ಇನ್ನುಳಿದ ಇಲಾಖೆಯ ಸರ್ಕಾರಿ ವಸತಿಗೃಹಗಳ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ಸದ್ಯ ವಾಸಿಸಲು ಯೋಗ್ಯವಿರುವ ಹಾಗೂ ಯೋಗ್ಯವಿರದ ಸರ್ಕಾರಿ ವಸತಿಗೃಹಗಳ ಸಂಖ್ಯೆ ಎಷ್ಟು;

ಇ) ಯೋಗ್ಯವಿರುವ ಸರಕಾರಿ ವಸತಿಗೃಹಗಳ್ಲಲಿ ನೌಕರರು/ ಅಧಿಕಾರಿಗಳು ಎಷ್ಟು ವರ್ಷಗಳಿಂದ ವಾಸವಾಗಿರುವರು ಹಾಗೂ ಅವರು ಯಾವ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವವರು;

ಈ) ವಾಸವಾಗಿರುವ ನೌಕರರು/ಅಧಿಕಾರಿಗಳು ಸರ್ಕಾರಕ್ಕೆ ಮನೆ ಬಾಡಿಗೆಯನ್ನು ಭರಿಸುತ್ತಿದ್ದಾರೆಯೇ; ಇಲ್ಲವಾಗಿದ್ದಲ್ಲಿ ಕಾರಣಗಳೇನು;

ಉ) ಎಲ್ಲಾ ಅಧಿಕಾರಿ/ನೌಕರರು ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ಕಾರ್ಯನಿರ್ವಹಿಸುತ್ತಿಲ್ಲವಾದಲ್ಲಿ ಅವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು?